ಕರ್ನಾಟಕ ಸರ್ಕಾರ

**ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.**

ದಿನಾಂಕ: 06/08/2014

# ಕ್ರೀಡಾ ಸಲಹಾ ಸಮಿತಿ ಸಭೆಯ ನಡಾವಳಿ-2014-15

ಸಭೆಯ ಆರಂಭದಲ್ಲಿ ಸಭೆಯ ಅಧ್ಯಕ್ಷರಿಗೆ ಹಾಗೂ ಕಾರ್ಯಕಾರಿ ಸಮಿತಿಯ ಸರ್ವ ಸದಸ್ಯರಿಗೆ ಕ್ರೀಡಾ ಶಾಖೆಯ ಶಾಖಾಧಿಕಾರಿಗಳಾದ ಡಾಃ ಶ್ರೀನಾಥ್‌ರವರು ಎಲ್ಲರಿಗೂ ಸ್ವಾಗತವನ್ನು ಕೋರಿದರು. ಆನಂತರ ಕಾರ್ಯಸೂಚಿಯಂತೆ 2014-15 ನೇ ಸಾಲಿನ ಕ್ರೀಡಾ ಚಟುವಟಿಕೆಗಳನ್ನು ನಡೆಸಲು ಚರ್ಚಿಸುವ ಕಾರ್ಯಕಲಾಪವನ್ನು ನಡೆಸಿಕೊಡುವಂತೆ ಮಾನ್ಯ ಅಧ್ಯಕ್ಷರಲ್ಲಿ ವಿನಂತಿಸಿದರು.

ಅಧ್ಯಕ್ಷತೆಯನ್ನು ವಹಿಸಿದ್ದ ಮಾನ್ಯ ನಿರ್ದೇಶಕರು ಸಭೆಯನ್ನು ಕುರಿತು ಮಾತನಾಡುತ್ತಾ ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ನಡೆಸುವ ಕ್ರೀಡಾ ಚಟುವಟಿಕೆಗಳ ಬಗ್ಗೆ ಅದರಲ್ಲೂ 2013-14 ನೇ ಸಾಲಿನ ಕ್ರೀಡಾ ಚಟುವಟಿಕೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾ, ಇದು ಇಲಾಖೆಗೆ ಹೆಸರನ್ನು ತಂದಿದೆ ಎಂದು ತಿಳಿಸಿದರು. ಸಭೆಯ ಅಜೆಂಡಾಗಳ ಬಗ್ಗೆ ಸದಸ್ಯರು ಸಭೆಯ ವಿಷಯ ಸೂಚಿಗಳನ್ನು ಒಂದೊಂದಾಗಿ ಚರ್ಚಿಸಿ ತೆಗೆದುಕೊಂಡ ತೀರ್ಮಾನಗಳು ಈ ಕೆಳಕಂಡಂತಿವೆ.

| ಕ್ರ.ಸಂ. | ವಿಷಯ | 2014-15 ನೇ ಸಾಲಿನಲ್ಲಿ ಹಮ್ಮಿಕೊಳ್ಳಲಾಗುವ ಕ್ರೀಡಾ ಚಟುವಟಿಕೆಗಳು ಮತ್ತು ಕೈಗೊಳ್ಳಲಾದ ನಿರ್ಣಯಗಳು |
|---|---|---|
| 1 | 2013-14 ನೇ ಸಾಲಿನ ಸಭಾ ನಡಾವಳಿಗಳನ್ನು ಓದಿ ದಾಖಲಿಸುವುದು. | 2013-14 ನೇ ಸಾಲಿನ ಸಭಾ ನಡಾವಳಿಗಳನ್ನು ಶಾಖಾಧಿಕಾರಿಗಳು ಓದಿದ್ದನ್ನು ದಾಖಲಿಸಲಾಯಿತು. |
| 2 | 2013-14 ನೇ ಸಾಲಿನ ಸಭಾ ನಡಾವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ. | ಕಳೆದ ಸಾಲಿನಲ್ಲಿ ಸಭೆಯಲ್ಲಿ ಸಭಾ ನಡಾವಳಿಯ ಮೂಲಕ ತೆದುಕೊಳ್ಳಲಾದ ತೀರ್ಮಾನವನ್ನು ಯಥಾವತ್ತಾಗಿ ಜಾರಿಗೊಳಿಸಲಾಗಿದೆ. |
| 3 | 2013-14 ನೇ ಸಾಲಿನ ಕ್ರೀಡಾ ವರದಿಯನ್ನು ಓದುವುದು. | 2013-14 ನೇ ಸಾಲಿನ ಕ್ರೀಡಾ ವರದಿಯನ್ನು ಕ್ರೀಡಾ ಶಾಖೆಯ ಶಾಖಾಧಿಕಾರಿಗಳು ಓದಿದರು. |
| 4. | 2013-14 ನೇ ಸಾಲಿನ ಕ್ರೀಡಾ ನಿಧಿ ಸಂಗ್ರಹಣೆಯನ್ನು ಸಭೆಯ ಮುಂದೆ ಮಂಡಿಸುವುದು. | 2013-14 ನೇ ಸಾಲಿನ ಕ್ರೀಡಾ ನಿಧಿಯ ಲೆಕ್ಕ ತಪಾಸಣೆಯು ನಡೆಯುತ್ತಿದ್ದು, ಅದು ಇನ್ನೂ ಪೂರ್ಣಗೊಳ್ಳದ್ದರಿಂದ ಆ ಕುರಿತು ಪೂರ್ಣ ಮಾಹಿತಿಯನ್ನು ನೀಡಲು ಸಾಧ್ಯವಾಗುತ್ತಿಲ್ಲವೆಂದು ಶಾಖಾಧಿಕಾರಿಗಳು ತಿಳಿಸಿದರು. ಈ ಸಂಬಂಧ ಸರ್ವ ಸದಸ್ಯರುಗಳಿಗೆ ಮುಂದೆ ಮಾಹಿತಿ ನೀಡಲಾಗುವುದೆಂದು ತಿಳಿಸುತ್ತಾ ಕೆಲವು ಜಿಲ್ಲಾ ಉಪನಿರ್ದೇಶಕರುಗಳು ಜಿಲ್ಲೆಗೆ ಸಂಬಂಧಿಸಿದ ಕ್ರೀಡಾ ನಿಧಿ ಕ್ರೋಢೀಕರಣ ಹಾಗೂ ಖರ್ಚಾದ ಬಗ್ಗೆ ಮಾಹಿತಿ ನೀಡುವಂತೆ ಕೋರಿದರು. |
| 5 | 2014-15 ನೇ ಸಾಲಿನಿಂದ ಹೊಸ ಕ್ರೀಡೆಗಳನ್ನು ಸೇರ್ಪಡೆ ಮಾಡುವ ಬಗ್ಗೆ. | 2014-2015 ರ ಸಾಲಿನಲ್ಲಿ ಹೊಸದಾಗಿ ಸೇರ್ಪಡೆ ಮಾಡಲು ಈ ಕೆಳಕಂಡ ಕ್ರೀಡೆಗಳನ್ನು ಸೇರ್ಪಡೆ ಮಾಡಲು ಅರ್ಜಿಗಳು ಬಂದಿವೆ.<br>1) ವುಶು 2) ಫ್ಲೋರ್ ಬಾಲ್ ಗೇಮ್ 3) ಸಿಲಂಬಮ್ 4) ಫುಟ್ ಬಾಲ್ ಟೆನ್ನಿಸ್ 5) ರೋಲ್ ಬಾಲ್ 6) ಕೂಡೋ 7) ಸಾಫ್ಟ್ ಟೆನ್ನಿಸ್<br>ಪ್ರಾಥಮಿಕ ಹಾಗೂ ಪ್ರೌಢಶಾಲಾ ಹಂತದಿಂದ ಎಲ್ಲಾ ಶಾಲೆಗಳಲ್ಲಿಯೂ ಈ ಕ್ರೀಡೆ ಇದ್ದಲ್ಲಿ ಹಾಗೂ ಗ್ರಾಮೀಣ ಪ್ರದೇಶದಲ್ಲಿಯೂ ಸಹ ಈ ಕ್ರೀಡೆಗಳು ಇದ್ದಲ್ಲಿ ಈ ಕ್ರೀಡೆಗಳನ್ನು ಸೇರ್ಪಡೆ ಮಾಡಿದಲ್ಲಿ ಉಪಯುಕ್ತವಾಗುತ್ತದೆ. ಮೇಲ್ಕಂಡ ಕ್ರೀಡೆಗಳು ಗ್ರಾಮೀಣ ಪ್ರದೇಶದಲ್ಲಿ ಇಲ್ಲದಿರುವುದರಿಂದ ಹಾಗೂ ಬಹುತೇಕ ದೈಹಿಕ ಶಿಕ್ಷಣ ಶಿಕ್ಷಕರಲ್ಲಿ ಈ ಮೇಲ್ಕಂಡ ಕ್ರೀಡೆಗಳ ಬಗ್ಗೆ ಅನುಭವ ಇಲ್ಲದಿರುವುದರಿಂದ ಮೇಲ್ಕಂಡ ಕ್ರೀಡೆಗಳನ್ನು ಹೊಸದಾಗಿ ಸೇರ್ಪಡೆ ಮಾಡುವ ಅಗತ್ಯವಿಲ್ಲವೆಂದು ಕ್ರೀಡಾ ಸಲಹಾ ಸಮಿತಿಯ ಎಲ್ಲಾ ಸದಸ್ಯರೂ ಒಕ್ಕೊರಲಿನಿಂದ ಅಭಿಪ್ರಾಯ ಪಟ್ಟಿರುತ್ತಾರೆ. |

| | | |
|---|---|---|
| 6 | 2014–15 ನೇ ಸಾಲಿನ ರಾಜ್ಯಮಟ್ಟದ ಕ್ರೀಡಾ ಸ್ಪರ್ಧೆಗಳನ್ನು ನಡೆಸಲು ಸ್ಥಳ ಗೊತ್ತು ಪಡಿಸುವುದು. | 2014–15 ನೇ ಸಾಲಿನ ರಾಜ್ಯಮಟ್ಟದ ಕ್ರೀಡೆಗಳನ್ನು ಈ ಕೆಳಕಂಡ ಜಿಲ್ಲೆಗಳಲ್ಲಿ ನಡೆಸಲು ಸಭೆ ತೀರ್ಮಾನಿಸಿತು. |

| ಕ್ರ ಸಂ | ಕ್ರೀಡೆಯ ಹೆಸರು | ಜಿಲ್ಲೆಯ ಹೆಸರು ಹಾಗೂ **ಕ್ರೀಡೆಗಳನ್ನು ನಡೆಸುವ ದಿನಾಂಕ** |
|---|---|---|
| 1 | ಸ್ವಿಮ್ಮಿಂಗ್ | **ಬೆಂಗಳೂರು ದಕ್ಷಿಣ,** ಅಕ್ಟೋಬರ್ 30,31 |
| 2 | ಟೇಬಲ್ ಟೆನ್ನಿಸ್ | **ಉತ್ತರಕನ್ನಡ,** ಸೆಪ್ಟೆಂಬರ್ 11–12 |
| 3 | ವಾಲಿಬಾಲ್ | **ಕೊಡಗು,** ನವೆಂಬರ್ 14, 15 |
| 4 | ಖೋ ಖೋ | **ಶಿವಮೊಗ್ಗ, ನವೆಂಬರ್ 24,25** |
| 5 | ಫುಟ್ ಬಾಲ್ | **ಬಳ್ಳಾರಿ,** ನವೆಂಬರ್ 6,7 |
| 6 | ಕಬಡ್ಡಿ | **ಬಾಗಲಕೋಟೆ ,** ಸೆಪ್ಟೆಂಬರ್ 16,17 |
| 7 | ಬ್ಯಾಸ್ಕೆಟ್ ಬಾಲ್ | **ಗುಲ್ಬರ್ಗಾ,** ಡಿಸೆಂಬರ್ 2,3 |
| 8 | ಷಟಲ್ ಬ್ಯಾಡ್ಮಿಂಟನ್ | **ಬೀದರ್,** ನವೆಂಬರ್ 11,12 |
| 9 | ಥ್ರೋ ಬಾಲ್ | **ರಾಮನಗರ,** ಡಿಸೆಂಬರ್ 15,16 |
| 10 | ಹಾಕಿ | **ಮೈಸೂರು,** ಡಿಸೆಂಬರ್ 8,9 |
| 11 | ಟೆನ್ನಿಕಾಯ್ಟ್ | **ಹಾಸನ,** ಸೆಪ್ಟೆಂಬರ್ 9,10 |
| 12 | ಅಥ್ಲೆಟಿಕ್ಸ್ | **ಚಿತ್ರದುರ್ಗ,** ನವೆಂಬರ್ 20,21,22 |
| 13 | ನೆಟ್ ಬಾಲ್ | **ದಕ್ಷಿಣ ಕನ್ನಡ ,** ಡಿಸೆಂಬರ್ 12,13 |
| 14 | ರೆಸ್ಲಿಂಗ್ | **ಬೆಳಗಾಂ ,** ಸೆಪ್ಟೆಂಬರ್ 20,21 |
| 15 | ಚೆಸ್ | **ದಕ್ಷಿಣ ಕನ್ನಡ,** ಡಿಸೆಂಬರ್ 18,19 |
| 16 | ಸೈಕ್ಲಿಂಗ್ | **ಬಿಜಾಪುರ,** ಅಕ್ಟೋಬರ್ 11,12 |
| 17 | ಜೂಡೋ | **ಧಾರವಾಡ,** ಡಿಸೆಂಬರ್ 13,14 |
| 18 | ಜಿಮ್ನಾಸ್ಟಿಕ್ಸ್ | **ಮೈಸೂರು,** ಡಿಸೆಂಬರ್ 7,8 |
| 19 | ಯೋಗ | **ಬೆಂಗಳೂರು ಗ್ರಾಮಾಂತರ, ನವೆಂಬರ್ 11,12** |
| 20 | ಲಾನ್ ಟೆನ್ನಿಸ್ | **ಬೆಂಗಳೂರು ಉತ್ತರ, ನವೆಂಬರ್ 26,27** |
| 21 | ಹ್ಯಾಂಡ್ ಬಾಲ್ | **ದಾವಣಗೆರೆ,** ಸೆಪ್ಟೆಂಬರ್ 13,14 |
| 22 | ಟೆಕ್ವಾಂಡೋ | **ಬೆಂಗಳೂರು ಉತ್ತರ,** ನವೆಂಬರ್ 29,30 |
| 23 | ಬಾಲ್ ಬ್ಯಾಡ್ಮಿಂಟನ್ | **ತುಮಕೂರು, ಸೆಪ್ಟೆಂಬರ್ 6,7** |
| 24 | ಕರಾಟೆ | **ಗದಗ,** ಡಿಸೆಂಬರ್ 6,7 |
| 25 | ಜಂಪ್ ರೋಪ್ | **ದಕ್ಷಿಣ ಕನ್ನಡ,** ಅಕ್ಟೋಬರ್ 17,18 |

| | | |
|---|---|---|
| 7 | ರಾಷ್ಟ್ರಮಟ್ಟದ ಕ್ರೀಡೆಗಳಲ್ಲಿ ವಿಜೇತರಾದ ಕ್ರೀಡಾಪಟುಗಳಿಗೆ ನಗದು ಬಹುಮಾನವನ್ನು ನೀಡುವ ಬಗ್ಗೆ. | 2013–14 ನೇ ಸಾಲಿನಲ್ಲಿ ರಾಷ್ಟ್ರಮಟ್ಟದ ಕ್ರೀಡಾ ಸ್ಪರ್ಧೆಗಳಲ್ಲಿ ವಿಜೇತರಾದ ಕ್ರೀಡಾಪಟುಗಳಿಗೆ ಪ್ರಶಸ್ತಿಯ ಜೊತೆಗೆ ಪ್ರಸ್ತುತ ನೀಡುತ್ತಿರುವ ನಗದು ಬಹುಮಾನವನ್ನು ದ್ವಿಗುಣಗೊಳಿಸಲು ಸಭೆಯ ಸರ್ವಾನುಮತದಿಂದ ಅಂಗೀಕಾರ ನೀಡಿತು.<br>ಮಾನ್ಯ ಅಧ್ಯಕ್ಷರು 2013–14 ನೇ ಸಾಲಿನಲ್ಲಿ ರಾಷ್ಟ್ರಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸಿ ವಿಜೇತರಾದ ಕ್ರೀಡಾಪಟುಗಳಿಗೆ ಪ್ರಶಸ್ತಿ ನೀಡುವ ಕಾರ್ಯಕ್ರಮವನ್ನು ಅತಿ ಜರೂರಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಲ್ಲಿ ನಡೆಸುವಂತೆ ತಿಳಿಸಿ, ಕಾರ್ಯಕ್ರಮ ನಡೆಸಲು ಬೇಕಾದ ಸಿದ್ದತೆಗಳನ್ನು ಮಾಡಿಕೊಳ್ಳಲು ಅಧಿಕಾರಿಗಳಿಗೆ ಸೂಚಿಸಿದರು. |
| 8 | ಕ್ರೀಡಾ ಅಭಿವೃದ್ಧಿ ಚಟುವಟಿಕೆಗಳಿಗಾಗಿ ಕ್ರೀಡಾ ನಿಧಿಯನ್ನು ಬಳಕೆ ಮಾಡುವ ಬಗ್ಗೆ. | 2014–15 ನೇ ಸಾಲಿಗೆ ಸಂಬಂಧಿಸಿದಂತೆ ಒಟ್ಟು ಲಭ್ಯವಿರುವ ಕ್ರೀಡಾ ನಿಧಿಯನ್ನು ಅಮೂಲಾಗ್ರವಾಗಿ ಲೆಕ್ಕ ಮಾಡಿ ಅದನ್ನು ಯಾವುದಕ್ಕೆ ಬಳಕೆ ಮಾಡಬೇಕೆಂದು ಮುಂದೆ ನಡೆಯುವ ಸಭೆಗಳಲ್ಲಿ ಚಿಂತಿಸುವಂತೆ ನಿರ್ಧರಿಸಲಾಯಿತು. |

| | | |
|---|---|---|
| 9 | ಕ್ರೀಡಾ ಕೋಚ್‌ಗಳಿಗೆ ಸಂಬಂಧಪಟ್ಟ ಪ್ರಾಚಾರ್ಯರು ಮತ್ತು ಜಿಲ್ಲಾ ಉಪ ನಿರ್ದೇಶಕರುಗಳಿಂದ ಮೇಲು ಸಹಿ ಮಾಡಿರುವ ಗುರುತಿನ ಪತ್ರ ನೀಡುವ ಬಗ್ಗೆ. | 2014-15 ನೇ ಸಾಲಿನಿಂದ ಪಪೂಶಿ ಇಲಾಖೆಯಿಂದ ನಡೆಸುವ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸುವ ಕೋಚ್‌ಗಳಿಗೆ ಸಂಬಂಧಪಟ್ಟ ಪ್ರಾಚಾರ್ಯರು ಮತ್ತು ಆಯಾಯ ಜಿಲ್ಲಾ ಉಪನಿರ್ದೇಶಕರುಗಳು ಮೇಲು ಸಹಿ ಮಾಡಿ ಗುರುತಿನ ಪತ್ರ ನೀಡುವಂತೆ ಸಭೆಯು ನಿರ್ಣಯಿಸಿತು. ಸಕಾಲದಲ್ಲಿ ಜಿಲ್ಲಾ ಉಪನಿರ್ದೇಶಕರು ಕೋಚ್‌ಗಳಿಗೆ ಗುರುತಿನ ಪತ್ರ ನೀಡಿ ಕಳುಹಿಸದಿದ್ದಲ್ಲಿ ಇಲಾಖೆಯ ನಿರ್ದೇಶಕರು ಹಾಗೂ ಸಹ ನಿರ್ದೇಶಕರು (ಆಡಳಿತ) ಇವರುಗಳು ಕೋಚ್‌ಗಳನ್ನು ಸೂಚಿಸಿ ಕಳುಹಿಸಲು ಸಭೆಯು ಅಧಿಕಾರ ನೀಡಿತು. |
| 10 | ರಾಜ್ಯ ಮಟ್ಟದ ಕ್ರೀಡೆಗಳಿಗೆ ವೀಕ್ಷಕರಾಗಿ ಹೋಗುವ ಇಲಾಖಾ ಅಧಿಕಾರಿಗಳು ಹಾಗು ರಾಷ್ಟ್ರಮಟ್ಟದ ಕ್ರೀಡೆಗಳಲ್ಲಿ ತಂಡದ ವ್ಯವಸ್ಥಾಪಕರಾಗಿ ತೆರಳುವ ಇಲಾಖಾ ಅಧಿಕಾರಿಗಳು ಮತ್ತು ತರಬೇತುದಾರರಾಗಿ ತೆರಳುವ ದೈಹಿಕ ಶಿಕ್ಷಣ ಉಪನ್ಯಾಸಕರಿಗೆ ಸಂಭಾವನೆ ನೀಡುವ ಬಗ್ಗೆ. | ರಾಜ್ಯ ಮಟ್ಟದ ಕ್ರೀಡೆಗಳಿಗೆ ವೀಕ್ಷಕರಾಗಿ ತೆರಳುವ ಇಲಾಖಾ ಅಧಿಕಾರಿಗಳಿಗೆ ರೂ. 2,000 ಸಂಭಾವನೆ ನೀಡಲು ಸಭೆಯ ತೀರ್ಮಾನಿಸಿತು ಹಾಗು ರಾಷ್ಟ್ರಮಟ್ಟದ ಕ್ರೀಡೆಗಳಲ್ಲಿ ತಂಡದ ವ್ಯವಸ್ಥಾಪಕರಾಗಿ ತೆರಳುವ ಇಲಾಖಾ ಅಧಿಕಾರಿಗಳು ಮತ್ತು ತರಬೇತುದಾರರಾಗಿ ತೆರಳುವ ದೈಹಿಕ ಶಿಕ್ಷಣ ಉಪನ್ಯಾಸಕರಿಗೆ ದಿನಕ್ಕೆ ರೂ. 600 ರಂತೆ ಸಂಭಾವನೆ ನೀಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| 11 | ರಾಷ್ಟ್ರ ಮಟ್ಟದ ಕ್ರೀಡೆಗಳನ್ನು ಆನ್ ಲೈನ್ ಮೂಲಕ ನೋಂದಣಿ ಮಾಡಿಕೊಳ್ಳಲು ಗಣಕಯಂತ್ರ, ಪ್ರಿಂಟರ್, ಸ್ಕ್ಯಾನರ್, ಕಾಪಿಯರ್ ಮತ್ತು ಅಂತರ್ಜಾಲ ಸಂಪರ್ಕ ಖರೀದಿಸುವ ಕುರಿತು. | ರಾಷ್ಟ್ರ ಮಟ್ಟದ ಕ್ರೀಡೆಗಳನ್ನು ಆನ್ ಲೈನ್ ಮೂಲಕ ನೋಂದಣಿ ಮಾಡಿಕೊಳ್ಳಲು ಗಣಕಯಂತ್ರ, ಪ್ರಿಂಟರ್, ಸ್ಕ್ಯಾನರ್, ಕಾಪಿಯರ್‌ಗಳನ್ನು ಖರೀದಿಸುವುದು ಮತ್ತು ಅಂತರ್ಜಾಲ ಸಂಪರ್ಕವನ್ನು ಪಡೆದುಕೊಳ್ಳಲು ರೂ. 1,00,000 (ಒಂದು ಲಕ್ಷ)ದೊಳಗೆ ವೆಚ್ಚವಾದಲ್ಲಿ ಕೋಟೇಶನ್ ಮೂಲಕ ಖರೀದಿಸಲು ಹಾಗು ರೂ. ಒಂದು ಲಕ್ಷ ಮೀರಿದಲ್ಲಿ ಟೆಂಡರ್ ಮೂಲಕ ಖರೀದಿಸುವಂತೆ ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು. |
| 12 | ಪರೀಕ್ಷಾ ಶಾಖೆಯಲ್ಲಿರುವಂತೆ ತಾಲ್ಲೂಕು, ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರಮಟ್ಟದ ಕ್ರೀಡೆಗಳಿಗೆ ಸಂಬಂಧಿಸಿದ ಲೆಕ್ಕಪತ್ರಗಳನ್ನು ಪರಿಶೀಲಿಸಲು ಕ್ರೀಡಾ ಶಾಖೆ ಹಾಗು ಲೆಕ್ಕಶಾಖೆಯ ಸಿಬ್ಬಂದಿಗಳಿಗೆ ಸಂಭಾವನೆ ನೀಡುವ ಬಗ್ಗೆ. | ತಾಲ್ಲೂಕು, ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರಮಟ್ಟದ ಕ್ರೀಡೆಗಳಿಗೆ ಸಂಬಂಧಿಸಿದ ವೋಚರ್ಸ್‌ಗಳನ್ನು ಪರಿಶೀಲಿಸುವುದು ಇಲಾಖಾ ಶಾಖೆಗಳ ಕರ್ತವ್ಯವಾಗಿರುವುದರಿಂದ ಆ ವಿಧದ ಸಂಭಾವನೆ ಅಗತ್ಯವಿಲ್ಲವೆಂಬುದನ್ನು ಸಭೆಯು ತೀರ್ಮಾನಿಸಿತು. |
| 13 | ಕ್ರೀಡಾ ಶಾಖೆಗೆ ಸ್ಟಾಂಪ್ಸ್ ಮತ್ತು ಲೇಖನ ಸಾಮಗ್ರಿಗಳನ್ನು ಖರೀದಿಸುವ ಬಗ್ಗೆ. | ಕ್ರೀಡಾ ಶಾಖೆಗೆ ಅಗತ್ಯವಿರುವ ಸ್ಟಾಂಪ್ಸ್ ಮತ್ತು ಲೇಖನ ಸಾಮಗ್ರಿಗಳನ್ನು ಖರೀದಿಸಲು ಅನುಮತಿಸಲಾಯಿತು. |
| 14 | ಕ್ರೀಡಾ ಸಾಮಗ್ರಿಗಳು ಮತ್ತು ಪರಿಕರಗಳನ್ನು ದಾಸ್ತಾನಿಸಲು ಕ್ರೀಡಾ ಶಾಖೆಗೆ ಪ್ರತ್ಯೇಕ ಕೊಠಡಿಯನ್ನು ಒದಗಿಸುವ ಕುರಿತು. | ಇಲಾಖೆಯಲ್ಲಿ ಕ್ರೀಡಾ ಸಾಮಗ್ರಿಗಳು ಮತ್ತು ಪರಿಕರಗಳನ್ನು ದಾಸ್ತಾನಿಸಲು ಕ್ರೀಡಾ ಶಾಖೆಗೆ ಪ್ರತ್ಯೇಕ ಕೊಠಡಿಯನ್ನು ಈ ಕೂಡಲೇ ಒದಗಿಸಿಕೊಡುವಂತೆ ಜಂಟಿ ನಿರ್ದೇಶಕರು (ಆಡಳಿತ) ಇವರು ಕ್ರಮ ಕೈಗೊಳ್ಳುವಂತೆ ಸಭೆಯ ಅಧ್ಯಕ್ಷರು ಸೂಚಿಸಿದರು. |
| 15 | ರಾಷ್ಟ್ರ ಮಟ್ಟದ ಕ್ರೀಡೆಗಳಿಗೆ ತೆರಳುವವರಿಗೆ ರೈಲ್ವೆ ಟಿಕೇಟ್ ನೋಂದಣಿ, ಖರೀದಿ ಇತ್ಯಾದಿ ಕಾರ್ಯಗಳಿಗೆ ಸಹಾಯಕವಾಗುವಂತೆ ದೈಹಿಕ ಶಿಕ್ಷಣ ಉಪನ್ಯಾಸಕರನ್ನು ಕ್ರೀಡೆಗಳು ನಡೆಯುವವರೆಗೆ ನಿಯೋಜನೆ ಮೇರೆಗೆ ನೇಮಕ ಮಾಡುವ ಬಗ್ಗೆ. | ರಾಷ್ಟ್ರ ಮಟ್ಟದ ಕ್ರೀಡೆಗಳಿಗೆ ತೆರಳುವ ಕ್ರೀಡಾಪಟುಗಳಿಗೆ ಯಾವುದೇ ತೊಂದರೆಯಾಗದಂತೆ ಕ್ರಮ ವಹಿಸುವ ನಿಟ್ಟಿನಲ್ಲಿ ರೈಲ್ವೆ ಟಿಕೇಟ್ ನೋಂದಣಿ, ಖರೀದಿ ಇತ್ಯಾದಿ ಕಾರ್ಯಗಳಿಗೆ ಸಹಾಯಕವಾಗುವಂತೆ ದೈಹಿಕ ಶಿಕ್ಷಣ ಉಪನ್ಯಾಸಕರನ್ನು ಕ್ರೀಡೆಗಳು ನಡೆಯುವವರೆಗೆ ಮಾತ್ರ ನಿಯೋಜನೆ ಮೇರೆಗೆ ನೇಮಕ ಮಾಡಿಕೊಳ್ಳುವಂತೆ ಸೂಚಿಸಲಾಯಿತು ಹಾಗು ಅವರಿಗೆ ಈ ಕಾರ್ಯಕ್ಕಾಗಿ ರೂ. 5,000 (ಐದು ಸಾವಿರ) ಸಂಭಾವನೆಯನ್ನು ನೀಡುವಂತೆ ತೀರ್ಮಾನಿಸಲಾಯಿತು. |
| 16 | ನಗದು ಪುಸ್ತಕವನ್ನು ಬರೆಯುವ ಲೆಕ್ಕ ಶಾಖೆಯ ಸಿಬ್ಬಂದಿಗೆ ಸಂಭಾವನೆ ನೀಡುವ ಕುರಿತು. | ಕ್ರೀಡಾ ಶಾಖೆಗೆ ಸಂಬಂಧಿಸಿದಂತೆ ಆಯವ್ಯಯವನ್ನು ನಗದು ಪುಸ್ತಕದಲ್ಲಿ ದಾಖಲಿಸುವ ಲೆಕ್ಕ ಶಾಖೆಯ ಸಿಬ್ಬಂದಿಗೆ ನೀಡುತ್ತಿರುವ ರೂ. 5,000 ಗಳ ಸಂಭಾವನೆಯನ್ನು ಮುಂದುವರೆಸುವಂತೆ ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |

| | | |
|---|---|---|
| 17 | ಪ್ರತೀ ಜಿಲ್ಲೆಗಳಲ್ಲಿರುವ ಕಾಲೇಜುಗಳಿಂದ ಸಂಗ್ರಹವಾಗುವ ವಿಶೇಷ ಕ್ರೀಡಾನಿಧಿಯನ್ನು ಸಂಗ್ರಹಣೆ ಮಾಡಿ ಕ್ರೋಢೀಕರಿಸುವ ಕಾರ್ಯಕ್ಕಾಗಿ ಜಿಲ್ಲಾ ಉಪ ನಿರ್ದೇಶಕರ ಕಛೇರಿಗೆ ದೈಹಿಕ ಶಿಕ್ಷಣ ಉಪನ್ಯಾಸಕ ರೊಬ್ಬರನ್ನು ನಿಯೋಜಿಸುವ ಕುರಿತು. | ಇಲಾಖೆಯಲ್ಲಿ ಕ್ರೀಡಾ ಶಾಖೆಯ ಕಾರ್ಯವು ತ್ವರಿತ ಮತ್ತು ಕ್ರಮಬದ್ಧವಾಗಿ ನಡೆಸುವ ಉದ್ದೇಶಕ್ಕಾಗಿ ಪ್ರತೀ ಜಿಲ್ಲೆಗಳಲ್ಲಿರುವ ಕಾಲೇಜುಗಳಿಂದ ವಿಶೇಷ ಕ್ರೀಡಾನಿಧಿಯನ್ನು ಸಂಗ್ರಹಿಸಿ, ದಾಖಲಿಸಿ, ತಾಲ್ಲೂಕುವಾರು ಕ್ರೋಢೀಕರಿಸಿ ಜಿಲ್ಲೆಯ ಒಟ್ಟು ಮೊತ್ತವನ್ನು ಮಾಹಿತಿಯೊಂದಿಗೆ ಕ್ರೀಡಾಶಾಖೆಗೆ ಕಳುಹಿಸುವ ಕಾರ್ಯಕ್ಕಾಗಿ ಜಿಲ್ಲಾ ಉಪ ನಿರ್ದೇಶಕರ ಕಛೇರಿಗೆ ದೈಹಿಕ ಶಿಕ್ಷಣ ಉಪನ್ಯಾಸಕರೊಬ್ಬರನ್ನು ನಿಯೋಜಿಸಲು ಸಭೆಯು ತೀರ್ಮಾನಿಸಿತು ಹಾಗು ಇವರುಗಳು ರಾಜ್ಯ ಮಟ್ಟದ ಕ್ರೀಡೆಗಳನ್ನು ನಡೆಸಲು ಹೆಚ್ಚಿನ ಜವಾಬ್ದಾರಿಯನ್ನು ನೀಡಿ ಅವು ಮುಗಿಯುವವರೆಗೂ ಅವರನ್ನು ಮುಂದುವರೆಸುವಂತೆ ಸೂಚಿಸಲಾಯಿತು. |
| 18 | ಅಧ್ಯಕ್ಷರ ಒಪ್ಪಿಗೆ ಮೇರೆಗೆ ಚರ್ಚಿಸಬಹುದಾದ ಇತರೆ ವಿಷಯಗಳು | ಸಭೆಯ ಅಧ್ಯಕ್ಷರ ಸೂಚನೆಯಂತೆ ಕ್ರೀಡಾ ಶಾಖೆಗೆ ಸಂಬಂಧಿಸಿದ ವಿಷಯಗಳನ್ನು ನಂತರದ ದಿನಗಳಲ್ಲಿ ಉಪ ಸಮಿತಿಯಲ್ಲಿರುವ<br>ಶ್ರೀ. ರವೀಂದ್ರ ಹೆಚ್ ರಿತ್ತಿ .ಜಂಟಿ ನಿರ್ದೇಶಕರು (ಆಡಳಿತ),<br>ಶ್ರೀ. ಅಶೋಕ್ ಕುಮಾರ್ ಸಹಾಯಕ ನಿರ್ದೇಶಕರು (ಶೈಕ್ಷಣಿಕ),<br>ಶ್ರೀ. ಪುಟ್ಟು ಕೆ.ಎಂ. ಉಪನಿರ್ದೇಶಕರು, ಮೈಸೂರು ಜಿಲ್ಲೆ,<br>ಡಾ: ಶ್ರೀನಾಥ್, ಕೆ.ಎಸ್ ಶಾಖಾಧಿಕಾರಿಗಳು, ಕ್ರೀಡಾ ಶಾಖೆ,<br>ದೈಹಿಕ ಶಿಕ್ಷಣದ ಸದಸ್ಯರಾದ<br>ಶ್ರೀ ಸಣ್ಣಪ್ಪ ಮತ್ತು ಶ್ರೀ ಬಸವರಾಜು ಇವರುಗಳೊಡನೆ ಚರ್ಚಿಸಲು ತೀರ್ಮಾನಿಸಲಾಯಿತು. |

ಅಂತಿಮವಾಗಿ ಶೈಕ್ಷಣಿಕ ಶಾಖೆಯ ಸಹಾಯಕ ನಿರ್ದೇಶಕರಾದ ಶ್ರೀ ಅಶೋಕ್ ಕುಮಾರ್‌ರವರು ಸಭೆಯಲ್ಲಿ ಭಾಗವಹಿಸಿ ಯಶಸ್ಸಿಗೆ ಕಾರಣರಾದ ಸರ್ವ ಸದಸ್ಯರಿಗೂ ಧನ್ಯವಾದಗಳನ್ನು ಅರ್ಪಿಸುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಿದರು.

ನಿರ್ದೇಶಕರು

ಪದವಿ ಪೂರ್ವ ಶಿಕ್ಷಣ ಇಲಾಖೆ